# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ವಾರ್ಡ್ ಸಂಖ್ಯೆ 09/ಸಭೆ/ಪಿಆರ್/05/2020-21 ದಿನಾಂಕ : 05/12/2020

ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ 09 ವಿದ್ಯಾರಣ್ಯಪುರ ವಾರ್ಡ್ ಕಛೇರಿಯಲ್ಲಿ ದಿನಾಂಕ 05/12/2020 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೈಗೊಂಡ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಹಾಜರಿದ್ದ ಅಧಿಕಾರಿ /ನೌಕರರು

1. ಶ್ರೀ ಶಿವಕುಮಾರ್ ಮುತ್ತುಸ್ವಾಮಿ ಗೌಡರ್, ನೋಡಲ್ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ
2. ಶ್ರೀ ಸೋಮನಾಥ್ ಎಸ್ ಜಾಧವ್, ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು
3. ಶ್ರೀಮತಿ ಧನಲಕ್ಷ್ಮಿ, ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ
4. ಶ್ರೀ ಬಾಬುರೆಡ್ಡಿ, ಸಹಾಯಕ ಅಭಿಯಂತರರು, ವಿದ್ಯುತ್
5. ಶ್ರೀ ನಾರಾಯಣಸ್ವಾಮಿ, Livestoke Officer
6. ಶ್ರೀ ಭಾರ್ಗವ್, ಹಿರಿಯ ಆರೋಗ್ಯ ಪರಿವೀಕ್ಷಕರು
7. ಶ್ರೀ ಕೆ.ನಂಜೇಗೌಡ, ತೆರಿಗೆ ನಿರೀಕ್ಷಕರು
8. ಕು॥ ಕಾವ್ಯ, ಸಹಾಯಕ ಅಭಿಯಂತರರು
9. ಶ್ರೀ ಸಿದ್ದರಾಜು, ಕಿರಿಯ ಆರೋಗ್ಯ ಪರಿವೀಕ್ಷಕರು

ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು

1. ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು
2. ಸಾರ್ವಜನಿಕರು

ಕು॥ ಕಾವ್ಯ, ಸಹಾಯಕ ಅಭಿಯಂತರರು:- ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು, ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು.

ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು

ವಿದ್ಯಾರಣ್ಯಪುರ ವ್ಯಾಪ್ತಿಯ ಹಲವಾರು ಕಡೆಗಳ ವಿದ್ಯುತ್ ದೀಪಗಳಲ್ಲಿ ಟೈಮರ್ ಅಳವಡಿಸಲು, ವಿದ್ಯಾರಣ್ಯಪುರ ಮುಖ್ಯ ರಸ್ತೆ, ಸಪ್ತಗಿರಿ ಲೇಔಟ್ 1ನೇ ಅಡ್ಡರಸ್ತೆಯಲ್ಲಿ ವಿದ್ಯುತ್ ದೀಪಗಳ ನಿರ್ವಹಣೆ ಸಮರ್ಪಕವಾಗಿರುವುದಿಲ್ಲವೆಂದು ದೂರಿದರು.

ಶ್ರೀ ಬಾಬು ರೆಡ್ಡಿ, ಸ.ಅ ರವರು ಎಲ್ಲಾ ಕಡೆಗಳಲ್ಲಿ ಎಲ್.ಇ.ಡಿ ಬಲ್ಬ್ ಹಾಗೂ ಟೈಮರ್ ಅಳವಡಿಸಲು ಆದೇಶಿಸಿರುವುದರಿಂದ ಇಲಾಖಾ ವತಿಯಿಂದ ಸರ್ವೇ ಕಾರ್ಯ ಪ್ರಗತಿಯಲ್ಲಿದ್ದು ಎಲ್.ಇ.ಡಿ ಬಲ್ಬ್ ಹಾಗೂ ಟೈಮರ್ ಅಳವಡಿಸದೆ ಇರುವ ಕಡೆಗಳಲ್ಲಿ ಟೈಮರ್ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು.

ಹೆಚ್.ಎಂ.ಟಿ ಬಡಾವಣೆ 5ನೇ ಬ್ಲಾಕ್, 2ನೇ ಮುಖ್ಯ ರಸ್ತೆ, ನಿವೇಶನ ಸಂಖ್ಯೆ 881 ಮತ್ತು 882ರ ಮುಂಭಾಗ, ಹೆಚ್.ಎಂ.ಟಿ ಲೇಔಟ್ 2ನೇ ಬ್ಲಾಕ್, 3ನೇ ಅಡ್ಡರಸ್ತೆ ಸ್ವತ್ತಿನ ಸಂಖ್ಯೆ 187ರ ಮುಂಭಾಗ ಹಾಗೂ ಜ್ಞಾನೇಶ್ವರಿ ಬಡಾವಣೆಯಲ್ಲಿ ಬೃಹದಾರಕಾರದ ಹಾಗೂ ಒಣಗಿದ ಮರವಿರುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಹಾನಿಯಾಗುವ ಸಾಧ್ಯತೆಯಿರುವುದಾಗಿ ದೂರು ನೀಡಿರುತ್ತಾರೆ.

ಕ್ರಮ: ಅರಣ್ಯಾಧಿಕಾರಿಗಳು, ಯಲಹಂಕ ವಲಯ

Scanned by CamScanner

ಲೇಕ್‌ಶೋರ್ ಗಾರ್ಡನ್, ಎ.ಪಿ.ಸಿ ಲೇಔಟ್‌ನ ಅಡ್ಡರಸ್ತೆಗಳಲ್ಲಿ ಕಸ ಗುಡಿಸುವಿಕೆ ಕಾರ್ಯ ಸಮರ್ಪಕವಾಗಿರುವುದಿಲ್ಲ, ಕಸದ ಗಾಡಿಯವರು ಕಡಿಮೆ ಲೌಡ್ ಸ್ಪೀಕರ್ ಇಟ್ಟು ಶಬ್ದವನ್ನು ಮಾಡುತ್ತಿರುವುದಾಗಿ ಹಾಗೂ ಒಣ ತ್ಯಾಜ್ಯ ಸಂಗ್ರಹಣಾ ವಾಹನ ನಿಗದಿತ ಸಮಯಕ್ಕೆ ಬರುತ್ತಿರುವುದಿಲ್ಲವೆಂದು, ದೊಡ್ಡಬೊಮ್ಮಸಂದ್ರ ಹಾಗೂ ಲೇಕ್‌ಶೋರ್ ಗಾರ್ಡನ್‌ನಲ್ಲಿ ಮಾರ್ಷಲ್‌ರನ್ನು ಕಳುಹಿಸಿ ಬ್ಲಾಕ್‌ಸ್ಪಾಟ್ ಆಗದಂತೆ ತಡೆಹಿಡಿಯಲು ಕೋರಿರುತ್ತಾರೆ.

**ಕ್ರಮ:** ಸ.ಕಾ.ಅ, ಎಸ್.ಡಬ್ಲ್ಯೂ.ಎಂ

ದೊಡ್ಡಬೊಮ್ಮಸಂದ್ರ ಆರ್ಚ್‌ನಿಂದ ವ್ಯಾಸ ಸ್ಕೂಲ್ ರಸ್ತೆಯಲ್ಲಿ ದೊಡ್ಡ ದೊಡ್ಡ ಗುಂಡಿಗಳು ಬಿದ್ದಿರುವುದಾಗಿ, ಜಿ.ಕೆ.ವಿ.ಕೆ ಡಬಲ್ ರಸ್ತೆಯನ್ನು ಅಗೆದು ಹಾಳು ಮಾಡಿರುವುದಾಗಿ ದೂರು ನೀಡಿರುತ್ತಾರೆ.

**ಕ್ರಮ:** ಕಾ.ಪಾ.ಅ, ರಸ್ತೆ & ಮೂಲಭೂತ ಸೌಕರ್ಯ

ಕೃಷ್ಣ ದೇವಸ್ಥಾನದಲ್ಲಿರುವ ಕಲ್ವರ್ಟ್‌ಅನ್ನು ವಿಸ್ತರಿಸಲು, ನಾರಾಯಣ ಸ್ಕೂಲ್ ಎದುರು ಹೊಸದಾಗಿ ಕಲ್ವರ್ಟ್ ನಿರ್ಮಿಸಲು ಹಾಗೂ ಸಪ್ತಗಿರಿ ಲೇಔಟ್ 1ನೇ ಅಡ್ಡರ್ತೆಯಲ್ಲಿ ಡಾಂಬರೀಕರಣ ಮಾಡಲು, ಹೆಚ್.ಎಂ.ಟಿ ಲೇಔಟ್ 9ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆಯಲ್ಲಿ ಚರಂಡಿ ಸಮಸ್ಯೆಯಿರುವುದಾಗಿ ದೂರಿರುತ್ತಾರೆ.

**ಕ್ರಮ:** ಸ.ಕಾ.ಅ, ವಿದ್ಯಾರಣ್ಯಪುರ ಉಪವಿಭಾಗ

**ನೋಡೆಲ್ ಅಧಿಕಾರಿ:** ಕೋವಿಡ್ -19 ರೋಗದ ತಡೆ ಹಾಗೂ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಪ್ರತಿಯೊಬ್ಬ ನಾಗರೀಕರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವುದು ಕಡ್ಡಾಯವಾಗಿದ್ದು, ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದವರ ಸಹಕಾರದೊಂದಿಗೆ ಬಡಾವಣೆಯ ಪ್ರತಿಯೊಬ್ಬ ನಾಗರೀಕರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವುದರಿಂದ ಕೋವಿಡ್-19 ರೋಗವನ್ನು ನಿಯಂತ್ರಣದಲ್ಲಿಡಲು ಅನುಕೂಲವಾಗುತ್ತದೆ.

ಶ್ರೀ ಶಿವಕುಮಾರ್ ಗೌಡರ್, ನೋಡಲ್ ಅಧಿಕಾರಿ ರವರು ಈ ಮೇಲ್ಕಂಡ ಅಂಶಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 09, ವಿದ್ಯಾರಣ್ಯಪುರ

ನೋಡಲ್ ಅಧಿಕಾರಿ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರರು
ವಿದ್ಯಾರಣ್ಯಪುರ ಉಪವಿಭಾಗ

Assistant Executive Engineer
Vidyaranyapura Sub Divisi--
BBMP, Bangalore - 97

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮಾನ್ಯ ಅಪರ ಆಯುಕ್ತರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
10. ಕಛೇರಿ ಕಡತಕ್ಕೆ.

Scanned by CamScanner